15/08/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ತಂದೆಯು ಬಿಂದು ಸ್ವರೂಪರಾಗಿದ್ದಾರೆ, ಅವರನ್ನು ಯಥಾರ್ಥವಾಗಿ ಅರ್ಥ ಮಾಡಿಕೊಂಡು ನೆನಪು ಮಾಡಿ, ಇದೇ ಬುದ್ಧಿವಂತಿಕೆಯಾಗಿದೆ"

ಪ್ರಶ್ನೆ: ಬೇಹದ್ದಿನ ದೃಷ್ಟಿಯಿಂದ ಸ್ವಪ್ನದ ಅರ್ಥವೇನಾಗಿದೆ? ಈ ಜಗತ್ತನ್ನು ಸ್ವಪ್ನಯುತ ಜಗತ್ತೆಂದು ಏಕೆ ಕರೆಯಲಾಗಿದೆ?

ಉತ್ತರ: ಯಾವ ಮಾತು ಕಳೆದುಹೋಗಿದೆಯೋ ಅದನ್ನು ಸ್ವಪ್ನವೆಂದು ಹೇಳಲಾಗುತ್ತದೆ. ನೀವೀಗ ತಿಳಿದುಕೊಂಡಿದ್ದೀರಿ- ಈ ಜಗತ್ತು ಈಗ ಸ್ವಪ್ನಯುತವಾಗಿದೆ ಅರ್ಥಾತ್ ಸತ್ಯಯುಗದಿಂದ ಹಿಡಿದು ಕಲಿಯುಗದ ಅಂತ್ಯದವರೆಗೆ ಎಲ್ಲವೂ ಕಳೆದುಹೋಗಿದೆ. ನಿಮಗೆ ಈಗ ಒಂದು ಸೆಕೆಂಡಿನಲ್ಲಿ ಈ ಜಗತ್ತಿನ ಸಂಸಾರದ ಸ್ಮೃತಿಯು ಬಂದುಬಿಟ್ಟಿತು. ನೀವು ಸೃಷ್ಠಿಯ ಆದಿ-ಮಧ್ಯ-ಅಂತ್ಯ, ಮೂಲವತನ-ಸೂಕ್ಷ್ಮವತನ, ಸ್ಥೂಲವತನವನ್ನು ತಿಳಿದುಕೊಂಡು ಮಾ॥ ಭಗವಂತ ಆಗಿಬಿಟ್ಟಿದ್ದೀರಿ.

ಗೀತೆ: ನನ್ನ ಮನದ ಬಾಗಿಲಲ್ಲಿ ಬಂದವರು ಯಾರು............

ಓಂ ಶಾಂತಿ. ಶಿವತಂದೆಯು ತನ್ನ ಮಧುರಾತಿ ಮಧುರ ಮಕ್ಕಳು, ಅಗಲಿಹೋಗಿ ಮರಳಿಸಿಕ್ಕಿದ ಸಾಲಿಗ್ರಾಮಗಳಿಗೆ ಕುಳಿತು ತಿಳಿಸುತ್ತಾರೆ. ಸಾಲಿಗ್ರಾಮಗಳೇ ಶಿವತಂದೆಯ ಮಕ್ಕಳಾಗಿದ್ದಿರಲ್ಲವೆ. ಮಕ್ಕಳಿಗೆ ಗೊತ್ತಿದೆ- ನಮಗೆ ಅವರು ಓದಿಸುತ್ತಾರೆ, ಯಾರನ್ನು ಸ್ವಲ್ಪವೂ ಸಹ ಮನುಷ್ಯರು ಅರಿತುಕೊಂಡಿಲ್ಲ. ಶಿವನ ಮಂದಿರಕ್ಕೆ ಹೋಗುತ್ತಾರೆ ಆದರೆ ಅಲ್ಲಂತೂ ಇಷ್ಟು ದೊಡ್ಡ ಶಿವಲಿಂಗವನ್ನು ನೋಡುತ್ತಾರೆ ಆದರೆ ನಮ್ಮ ತಂದೆಯು ಬಿಂದುವಾಗಿದ್ದಾರೆ ಎಂಬುದನ್ನು ತಿಳಿಯುತ್ತಾರೆಯೇ! ಯಾವ ಮಕ್ಕಳು ಶಿವತಂದೆಯನ್ನು ಇಷ್ಟು ದೊಡ್ಡರೂಪವೆಂದು ತಿಳಿದು ನೆನಪು ಮಾಡುತ್ತಾರೆ ಅಥವಾ ಮಾಡುತ್ತಿರುತ್ತಾರೆ. ಅವರೂ ಸಹ ಮುಗ್ಧರಾಗಿದ್ದಾರೆ ಏಕೆಂದರೆ ಅದೂ ಸಹ ತಪ್ಪಾಗಿದೆ. ತಂದೆಯು ತಿಳಿಸುತ್ತಾರೆ- ನಾನು ಬಿಂದುವಾಗಿದ್ದೇನೆ, ಈಗ ಬಿಂದುವನ್ನು ಯಾರು ಅರಿತುಕೊಳ್ಳಲು ಸಾಧ್ಯ! ಭಲೆ ಕೆಲವರು ಅಖಂಡ ಜ್ಯೋತಿಸ್ವರೂಪನಾಗಿದ್ದಾರೆ, ಈ ತರಹ ಇದ್ದಾರೆ ಎಂದು ಹೇಳುತ್ತಾರೆ ಆದರೆ ತಂದೆಯಂತೂ ಬಿಂದುವಾಗಿದ್ದಾರೆ ಅವರನ್ನು ನೆನಪು ಮಾಡುವುದು ಬಹಳ ಪರಿಶ್ರಮವಾಗಿದೆ. ಗಳಿಗೆ-ಗಳಿಗೆಯೂ ಸಹ ಮರೆತುಹೋಗುತ್ತಾರೆ. ಭಕ್ತಿಮಾರ್ಗದಲ್ಲಿ ಶಿವಲಿಂಗದ ಮೇಲೆ ಹೂ ಹಾಕುವುದು ಹಾಗೂ ಪೂಜೆ ಮಾಡುವ ಅಭ್ಯಾಸವಾಗಿಬಿಟ್ಟಿದೆ ಆದ್ದರಿಂದ ಶಿವಲಿಂಗವು ನೆನಪಿರುತ್ತದೆ ಆದರೆ ನಮ್ಮ ತಂದೆಯು ಬಿಂದುರೂಪವಾಗಿದ್ದಾರೆ ಎಂಬುದನ್ನು ಗಳಿಗೆ-ಗಳಿಗೆಯೂ ನೆನಪು ಮಾಡುತ್ತಾರೆ. ಇಡೀ ನಾಟಕದಲ್ಲಿ ಅವರದು ಯಾವ ಪಾತ್ರವಿದೆಯೋ ಅದನ್ನು ಅಭಿನಯಿಸುತ್ತಾರೆ. ಬಿಂದುವಿನ ಮಹಿಮೆಯನ್ನು ಅವರು ಸುಖದ ಸಾಗರ, ಶಾಂತಿಯ ಸಾಗರನಾಗಿದ್ದಾರೆ ಎಂಬುದನ್ನು ಮಹಿಮೆ ಮಾಡುತ್ತಾರೆಯೇ! ಏಕೆಂದರೆ ತಂದೆಯು ಎಷ್ಟು ಚಿಕ್ಕಬಿಂದುವಾಗಿದ್ದಾರೆ.

ಮಕ್ಕಳು ಕೇಳುತ್ತಾರೆ- ಯಾರನ್ನು ನೆನಪಿನಲ್ಲಿಟ್ಟುಕೊಳ್ಳುವುದು! ಈ ಮಾತುಗಳನ್ನು ಬುದ್ಧಿವಂತರೇ ತಿಳಿದುಕೊಳ್ಳಲು ಸಾಧ್ಯ, ಇಲ್ಲದಿದ್ದರೆ ಅದೇ ಶಿವಲಿಂಗವು ನೆನಪಿಗೆ ಬಂದುಬಿಡುತ್ತದೆ. ಕೃಷ್ಣನಂತೂ ಬುದ್ಧಿಯಲ್ಲಿ ಚೆನ್ನಾಗಿ ಕುಳಿತುಕೊಳ್ಳುತ್ತಾನೆ ಆದರೆ ತಂದೆಯಂತೂ ಬಿಂದುವಾಗಿದ್ದಾರೆ. ಗೀತೆಯಲ್ಲಿಯೂ ಸಹ ಹೇಳುತ್ತಾರೆ- ನೆನಪು ಮಾಡಿದರೂ ಸಹ ನೆನಪಿಗೆ ಬರುವುದಿಲ್ಲ ಅಂದಾಗ ಅವರ ಚಹರೆ ಹೇಗಿದೆ? ಇದೂ ಸಹ ವಿಚಿತ್ರವಾಗಿದೆ, ತಂದೆಯು ಎಷ್ಟು ಚಿಕ್ಕ ಬಿಂದುವಾಗಿದ್ದಾರೆ! ಜ್ಞಾನದ ನೃತ್ಯವನ್ನು ಮಾಡುತ್ತಾರೆ, ಇದು ಸ್ವಪ್ನಗಳ ಜಗತ್ತು ಎಂದು ಹೇಳಲಾಗುತ್ತದೆ. ಕಳೆದುಹೋಗಿರುವ ಮಾತನ್ನು ಸ್ವಪ್ನವೆಂದು ಹೇಳಲಾಗುತ್ತದೆ. ಸ್ವಪ್ನಯುತ ಸಂಸಾರ ಯಾವುದು ಕಳೆದುಹೋಗಿದೆಯೋ ಅದು ನಿಮ್ಮ ಬುದ್ಧಿಯಲ್ಲಿ ಬರುತ್ತದೆ, ಇಡೀ ಬ್ರಹ್ಮಾಂಡ, ಮೂಲವತನ, ಸೂಕ್ಷ್ಮವತನ, ಸತ್ಯಯುಗ, ತ್ರೇತಾಯುಗ, ದ್ವಾಪರ, ಎಲ್ಲವೂ ಸ್ವಪ್ನವಾಗಿಬಿಟ್ಟಿತು. ಯಾವುದು ಕಳೆದುಹೋಗುತ್ತದೆಯೋ ಅದು ಸ್ವಪ್ನವಾಗಿಬಿಟ್ಟಿತು ಈಗ ಈ ಕಲಿಯುಗಕ್ಕೂ ಅಂತ್ಯವಾಗಿದೆ. ಇದು ಸ್ವಪ್ನಯುಗ ಜಗತ್ತಾಗಿದೆ. ಸೂರ್ಯವಂಶಿ-ಚಂದ್ರವಂಶಿಯೂ ಸಹ ಸ್ವಪ್ನವಾಯಿತು ಇದಕ್ಕೆ ಸ್ವಪ್ನಗಳ ಸಂಸಾರವೆಂದು ಕರೆಯಲಾಗುವುದು. ಇಷ್ಟು ರಹಸ್ಯವನ್ನು ನೀವು ಮಕ್ಕಳ ವಿನಃ ಮತ್ತ್ಯಾರೂ ಅರಿತುಕೊಂಡಿಲ್ಲ. ಸತ್ಯಯುಗದಲ್ಲಿ ಎಷ್ಟು ಅಪಾರ ಸುಖವಿತ್ತು ಅದೆಲ್ಲವೂ ಕಳೆದುಹೋಯಿತು. ಈಗ ನೀವು ಮಕ್ಕಳ ಬುದ್ಧಿಯಲ್ಲಿ ಆದಿ-ಮಧ್ಯ-ಅಂತ್ಯದ ಪೂರ್ಣ ಜ್ಞಾನವಿದೆ, ಒಬ್ಬ ತಂದೆಯದೇ ನೆನಪಿರಬೇಕು. ತಂದೆಯು ಏನನ್ನು ತಿಳಿಸುತ್ತಾರೆಯೋ ಅದನ್ನು ಮತ್ತ್ಯಾರೂ ತಿಳಿಸಲು ಸಾಧ್ಯವಿಲ್ಲ. ನಿಮ್ಮ ಬುದ್ಧಿಯಲ್ಲಿ ಸ್ವಪ್ನಗಳ ಸಂಸಾರವಿದೆ. ಇಂತದ್ದೆಲ್ಲವೂ ಕಳೆದುಹೋಯಿತೆಂದು ಬುದ್ಧಿಗೆ ಗೊತ್ತಿದೆಯಲ್ಲವೆ. ನಿಮಗೆ ಮೇಲಿನಿಂದ ಹಿಡಿದು ಅಂದರೆ ಆದಿಯಿಂದ ಅಂತ್ಯದವರೆಗಿನ ಎಲ್ಲಾ ಜ್ಞಾನವು ಬುದ್ಧಿಯಲ್ಲಿದೆ. ನೀವೀಗ ತ್ರಿಕಾಲದರ್ಶಿ, ತ್ರಿಲೋಕಿನಾಥರಾಗಿಬಿಟ್ಟಿದ್ದೀರಿ. ತ್ರಿಲೋಕಿನಾಥ ಆಗುವುದರಿಂದ ನೀವು ಹೇಗೆ ಭಗವಂತರಾಗಿಬಿಡುತ್ತೀರಿ. ಭಗವಂತ ಕುಳಿತು ನಿಮಗೆ ಶಿಕ್ಷಣವನ್ನು ಕೊಡುತ್ತಾರೆ. ಸೆಕೆಂಡಿನಲ್ಲಿ ಸ್ವಪ್ನ ಬರುತ್ತದೆಯಲ್ಲವೆ ಅಂದಾಗ ಒಂದು ಸೆಕೆಂಡಿನಲ್ಲಿ ನಿಮಗೆ ಬೀಜ ಮತ್ತು ವೃಕ್ಷ ಎಲ್ಲವೂ ನೆನಪಿಗೆ ಬರಬೇಕು. ತಂದೆಯೂ ತಿಳಿಸುತ್ತಾರೆ- ಆದಿ-ಮಧ್ಯ-ಅಂತ್ಯದ ಜ್ಞಾನವು ನನ್ನ ಬಳಿಯಿದೆ ಆದ್ದರಿಂದಲೇ ನನ್ನನ್ನು ಜ್ಞಾನಸಾಗರ, ಜ್ಞಾನಪೂರ್ಣ, ತಿಳಿದು-ತಿಳಿಸಿಕೊಡುವವರು ಎಂದು ಹೇಳುತ್ತಾರೆ.

ಪ್ರತಿಯೊಬ್ಬರ ಸ್ಥಿತಿಯು ಹೀಗೆಯೇ ಇರುವುದೆಂದು ನನಗೆ ಗೊತ್ತಿದೆ. ಒಬ್ಬೊಬ್ಬರ ಸ್ಥಿತಿಯನ್ನು ನಾನು ಕುಳಿತು ತಿಳಿದುಕೊಳ್ಳುತ್ತೇನೆಯೇ! ಯಾವ ಸ್ಥಿತಿಯು ಕಲ್ಪದ ಹಿಂದೆ ಇತ್ತೋ ಅದೇ ಸ್ಥಿತಿಯಲ್ಲಿದ್ದೀರಿ ಅದನ್ನು ನೀವೂ ಸಹ ತಿಳಿದುಕೊಂಡಿದ್ದೀರಿ. ಪುರುಷಾರ್ಥ ಮಾಡುವುದಕ್ಕಾಗಿ ಹೇಳುತ್ತೇನೆ- ಚೆನ್ನಾಗಿ ಪುರುಷಾರ್ಥ ಮಾಡಿ.

ಈಗ ನೀವು ಸ್ವದರ್ಶನ ಚಕ್ರಧಾರಿಗಳಾಗಬೇಕಾಗಿದೆ. ನಿಮಗೆ ಗೊತ್ತಿದೆ- ಇಂತಿಂತದ್ದೆಲ್ಲವೂ ಕಳೆದುಹೋಯಿತು- ಹೀಗೆ ದೇವತೆಗಳು ರಾಜ್ಯ ಮಾಡುತ್ತಿದ್ದರು, ಪುನಃ ಬಂದು ರಾಜ್ಯ ಮಾಡುತ್ತಾರೆ. ಭೂತ, ವರ್ತಮಾನ, ಭವಿಷ್ಯ- ಇದನ್ನು ನೆನಪು ಮಾಡುತ್ತಾ ಇರಿ. ಇದನ್ನೇ ಸ್ವದರ್ಶನಚಕ್ರವೆಂದು ಹೇಳಲಾಗುವುದು. ಶಿವಲಿಂಗವನ್ನು ನೆನಪು ಮಾಡುವುದರಲ್ಲಂತೂ ಅನುಭವಿಗಳಾಗಿದ್ದಾರೆ. ತಂದೆಯು ಜ್ಯೋತಿರ್ಲಿಂಗ ಆಗಿದ್ದಾರೆಂದು ತಿಳಿಯುತ್ತಾರೆ ಆದರೆ ತಂದೆಯು ಬಿಂದುರೂಪದಲ್ಲಿದ್ದಾರೆಂದು ಹೇಳಿದರೆ ಗೊಂದಲಕ್ಕೆ ಒಳಗಾಗುತ್ತಾರೆ. ಆತ್ಮವು ಚಿಕ್ಕದು, ಪರಮಾತ್ಮನ ರೂಪವು ದೊಡ್ಡದೆಂದು ಮನುಷ್ಯರು ತಿಳಿಯುತ್ತಾರೆ. ಈಗ ನೀವು ಮಕ್ಕಳಿಗೆ ಗೊತ್ತಿದೆ- ಈ ಕಲಿಯುಗೀ ಪ್ರಪಂಚದಲ್ಲಿ, ಈ ಸಮಯದಲ್ಲಿ ನೋಡಿ ಎಷ್ಟೊಂದು ಆಡಂಬರವಿದೆ! ಇದನ್ನು ಮಾಯೆಯ ಆಡಂಬರವೆಂದು ಕರೆಯಲಾಗುತ್ತದೆ. ಈಗ ಪ್ರಪಂಚವು ಎಷ್ಟು ಸುಂದರವಾಗಿಬಿಟ್ಟಿದೆ, ದೊಡ್ಡ-ದೊಡ್ಡ ಮಹಲುಗಳು ನಿರ್ಮಾಣವಾಗಿವೆ ಎಂದು ಹೇಳುತ್ತಾರಲ್ಲವೆ. ಅಮೇರಿಕಾ ಎಷ್ಟೊಂದು ಆಡಂಬರದಿಂದ ಕೂಡಿದೆ. ಎಷ್ಟು ಸುಂದರವಾದ ವಸ್ತುಗಳು ನಿರ್ಮಿತವಾಗುತ್ತವೆ. ಆದರೆ ಇವೆಲ್ಲವೂ ವಿನಾಶವಾಗುವ ವಸ್ತುಗಳಾಗಿವೆ, ಈಗ ಸಮಾಪ್ತಿಯಾಗಿಬಿಡುತ್ತವೆ ಎಂದು ನಾವು ತಿಳಿಯುತ್ತೇವೆ. ದಿನ-ಪ್ರತಿದಿನ ದೊಡ್ಡ-ದೊಡ್ಡ ಕಟ್ಟಡಗಳು, ಅಣೆಕಟ್ಟುಗಳು ಇತ್ಯಾದಿಗಳನ್ನು ಈ ರೀತಿ ಕಟ್ಟುತ್ತಾರೆ, ಹೇಗೆ ಸಂಪೂರ್ಣ ಹೊಸ ಪ್ರಪಂಚವಾಗಿದೆ ಎಂಬಂತೆ. ಮಾಯಾವೀ ಪುರುಷರಲ್ಲವೆ. ಇದು ಆಸುರೀ ಸಂಪ್ರದಾಯದ ಆಡಂಬರವಾಗಿದೆ. ಇವೆಲ್ಲವೂ ಚಮತ್ಕಾರವಾಗಿದೆ, ಈಗ ಹೋಯಿತೆಂದರೆ ಹೋಯಿತು. ದೊಡ್ಡ-ದೊಡ್ಡ ವೈಜ್ಞಾನಿಕ ಅಭಿಮಾನಿಗಳು ಯಾರಿದ್ದಾರೆ ಅವರ ಬುದ್ಧಿಯಲ್ಲಿ ಇವೆಲ್ಲವೂ ಸಮಾಪ್ತಿಯಾಗಿಬಿಡುತ್ತವೆ ಎಂಬುದಿದೆ. ಒಬ್ಬರು ಇನ್ನೊಬ್ಬರಿಗೆ ನೀವು ಇದರಲ್ಲಿ ಪ್ರವೇಶ ಮಾಡಬೇಡಿ, ಇಲ್ಲವೆಂದರೆ ಎಲ್ಲವೂ ಸಮಾಪ್ತಿಯಾಗಿಬಿಡುತ್ತವೆ ಎಂದು ಹೇಳುತ್ತಾರೆ. ಅಮೇರಿಕಾ ತನ್ನನ್ನು ಬಲಶಾಲಿ ಎಂದು ತಿಳಿಯುತ್ತದೆ ಅಂದಮೇಲೆ ಅವಶ್ಯವಾಗಿ ಎರಡನೇ ನಂಬರಿನಲ್ಲಿಯೂ ಸಹ ಎದುರಿಸುವವರು ಇದ್ದೇ ಇರುತ್ತಾರೆ. ಗಾಯನವೂ ಇದೆ- ಎರಡು ಬೆಕ್ಕುಗಳು ಜಗಳವಾಡುತ್ತಲೇ ಯಾದವರು ತಮ್ಮ ಕುಲದ ವಿನಾಶ ಮಾಡಿಕೊಂಡರು ಅಂದಾಗ ಅವರು ಎರಡು ಬೆಕ್ಕುಗಳಾದರಲ್ಲವೆ. ಅದೇ ಪ್ರತ್ಯಕ್ಷರೂಪದಲ್ಲಿ ಆಗುತ್ತಾ ಇದೆ.

ನೀವು ಮಕ್ಕಳು ತಿಳಿದುಕೊಂಡಿದ್ದೀರಿ- ಹಿಂದೆಯೂ ಸಹ ಈ ಸಮಯದಲ್ಲಿಯೇ ನೀವೇ ಜ್ಞಾನವನ್ನು ಪಡೆದಿದ್ದಿರಿ, ಈಗಲೂ ಪಡೆಯುತ್ತಿದ್ದೀರಿ. ತಂದೆಯು ಬಂದು ಎಲ್ಲಾ ಜ್ಞಾನವನ್ನು ತಿಳಿಸುತ್ತಾರೆ. ಹೇಗೆ ತಂದೆಯ ಬುದ್ಧಿಯಲ್ಲಿದೆಯೋ ಹಾಗೆಯೇ ನೀವು ಮಕ್ಕಳ ಬುದ್ಧಿಯಲ್ಲಿಯೂ ಇದೆ- ಬಿಂದುವಿಗೆ ಶಿವ ಎಂದು ಕರೆಯಲಾಗುತ್ತದೆ. ಆತ್ಮದಲ್ಲಿಯೂ ಸಹ ಎಲ್ಲಾ ಪಾತ್ರವಿದೆ. ನಿಮ್ಮದು ಸತ್ಯಯುಗದಿಂದ ಹಿಡಿದು ಕಲಿಯುಗದವರೆಗೆ ಸರ್ವತೋಮುಖಿ ಪಾತ್ರವಾಗಿದೆ. ಸತ್ಯಯುಗ-ತ್ರೇತಾದಲ್ಲಿ ನೀವು ಯಾವಾಗ ಸುಖವನ್ನು ಭೋಗಿಸುತ್ತೀರಿ ಆ ಸಮಯದಲ್ಲಿ ತಂದೆಯ ಯಾವುದೇ ಪಾತ್ರವಿಲ್ಲ. ತಂದೆಯು ತಿಳಿಸುತ್ತಾರೆ- ನನಗಿಂತಲೂ ನಿಮ್ಮದು ಹೆಚ್ಚಿನ ಪಾತ್ರವಿದೆ. ನೀವು ಸುಖದಲ್ಲಿರುತ್ತೀರಿ ಆಗ ನಾನು ನಿರ್ವಾಣಧಾಮದಲ್ಲಿರುತ್ತೇನೆ. ನನ್ನದು ಯಾವುದೇ ಪಾತ್ರವಿರುವುದಿಲ್ಲ. ನೀವು ಸರ್ವತೋಮುಖಿ ಪಾತ್ರವನ್ನು ಅಭಿನಯಿಸುತ್ತೀರಿ ಅಂದಾಗ ಸುಸ್ತಾಗಿರುತ್ತೀರಿ. ಆದ್ದರಿಂದಲೇ ಕಾಲುಗಳನ್ನು ಒತ್ತಿದರೆಂದು ಗಾಯನವಿದೆ. ತಂದೆಯು ತಿಳಿಸುತ್ತಾರೆ- ಮಕ್ಕಳೇ, ನೀವು ಸುಸ್ತಾಗಿರುವಿರಿ. ನೀವು ಅರ್ಧಕಲ್ಪ ಭಕ್ತಿ ಮಾಡಿದಿರಿ, ಎಲ್ಲಾ ಕಡೆಯೂ ಅಲೆದಾಡಿ ಸುಸ್ತಾಗಿದ್ದೀರಿ. ಭಕ್ತಿಮಾರ್ಗದಲ್ಲಿ ಅಲೆದಾಡುತ್ತಾ-ಅಲೆದಾಡುತ್ತಾ ನೀವು ಸುಸ್ತಾಗಿಬಿಡುತ್ತೀರಿ ನಂತರ ತಂದೆಯು ಬಂದು ಉಜ್ವಲಗೊಳಿಸುತ್ತಾರೆ, ಪೂಜಾರಿಗಳಿಂದ ಪೂಜ್ಯರನ್ನಾಗಿ ಮಾಡಿಬಿಡುತ್ತಾರೆ. ನಿಮಗೆ ಗೊತ್ತಿದೆ- ನಾವೇ ಪೂಜ್ಯರಾಗಿದ್ದೆವು ಮತ್ತೆ ನಾವೇ ಪೂಜಾರಿಗಳಾಗಿದ್ದೇವೆ ಆದರೆ ಪರಮಾತ್ಮನೇ ಪೂಜ್ಯ ಆದರೆ ಅವರು ಪೂಜಾರಿಯಲ್ಲ. ನಾವೇ ಪೂಜ್ಯರು-ಪೂಜಾರಿಗಳಾಗುತ್ತೇವೆ.

ಭಾರತವೇ ಅವಿನಾಶಿ ಖಂಡವೆಂದು ಗಾಯನವಿದೆ. ಭಾರತವು ಶಿವತಂದೆಯ ಜನ್ಮಭೂಮಿಯಾಗಿದೆ. ಜನ್ಮಭೂಮಿಯಲ್ಲಿಯೇ ಮನುಷ್ಯರು ಬಲಿಹಾರಿಯಾಗುತ್ತಾರೆ. ಕಾಂಗ್ರೆಸ್ಸಿನವರು ನೋಡಿ- ಜನ್ಮಭೂಮಿಗಾಗಿ ಎಷ್ಟೊಂದು ತಲೆಕೆಡಿಸಿಕೊಂಡರು. ವಿದೇಶಿಯರನ್ನು ಹೊರಗೆ ಹಾಕಿದರು. ಈ ಜನ್ಮಭೂಮಿಯು ಸ್ವರ್ಗವಾಗಿತ್ತು ನಂತರ ಪಂಚವಿಕಾರರೂಪಿ ಮಾಯೆಯು ಬಂದು ಆಕ್ರಮಣ ಮಾಡಿದೆ, ನಾವು ರಾವಣನನ್ನು ದೊಡ್ಡಶತ್ರುವೆಂದು ತಿಳಿಯುತ್ತೇವೆ ಆದರೆ ಬಹಳ ಶತ್ರು ಮಯಾ ರಾವಣನಾಗಿದ್ದಾನೆ. ರಾವಣನೇ ನಮ್ಮ ರಾಜ್ಯಭಾಗ್ಯವನ್ನು ತಿಂದುಬಿಟ್ಟಿದ್ದಾನೆಂದು ಯಾರೂ ಅರಿತುಕೊಂಡಿಲ್ಲ. ಇದು ಗುಪ್ತವಾಗಿ ಇಲಿಯ ತರಹ ಕಚ್ಚುತ್ತಿರುತ್ತದೆ. ಇದು ಯಾರಿಗೂ ತಿಳಿಯುತ್ತಿಲ್ಲ. ಕಚ್ಚುತ್ತಾ-ಕಚ್ಚುತ್ತಾ ಒಂದೇಸಲ ದಿವಾಳಿಗಳನ್ನಾಗಿ ಮಾಡಿಬಿಟ್ಟಿದೆ. ನಮ್ಮ ರಾಜ್ಯಭಾಗ್ಯವನ್ನು ಕಸಿದುಕೊಂಡಿದೆ ಎಂದು ಯಾರಿಗೂ ಗೊತ್ತಿಲ್ಲ. ನಮ್ಮ ಶತ್ರು ಯಾರು? ನಾವು ಹೇಗೆ ಕಂಗಾಲರಾದೆವು? ಇದು ಯಾರಿಗೂ ಗೊತ್ತಿಲ್ಲ. ಮಾಯೆಯು ದೊಡ್ಡ ಇಲಿಯಾಗಿದೆ. ಅರ್ಧಕಲ್ಪ ತಿನ್ನುತ್ತಾ-ತಿನ್ನುತ್ತಾ ಭಾರತವನ್ನು ಕವಡೆಯ ತರಹ ಮಾಡಿಬಿಟ್ಟಿದೆ. ಬಹಳ ಬಲಶಾಲಿಯಾಗಿದೆ. ಈಗ ಪುನಃ ನೀವು ಅದರ ಮೇಲೆ ಜಯ ಪಡೆಯುತ್ತಿದ್ದೀರಿ ಏಕೆಂದರೆ ನಿಮಗೆ ಗೊತ್ತಿದೆ- ನಮಗೆ ಹೇಗೆ ಗುಪ್ತ ರೀತಿಯಲ್ಲಿ ರಾಜ್ಯವನ್ನು ಪಡೆಯುತ್ತೇವೆ. ಹೇಗೆ ಗುಪ್ತ ರೀತಿಯಲ್ಲಿ ಕಳೆದುಕೊಂಡಿದ್ದೇವೆ. ಈಗ ಪುನಃ ಗುಪ್ತ

ರೀತಿಯಲ್ಲಿಯೇ ಪಡೆಯುತ್ತೇವೆ, ಈಗ ಇದರ ಮೇಲೆ ಜಯಪಡೆಯಬೇಕೆಂಬುದು ಯಾರಿಗೂ ಗೊತ್ತಿಲ್ಲ. ಅದು ಎಷ್ಟು ಆಳವಾದ ರಹಸ್ಯಗಳಾಗಿವೆ! ತಂದೆಯ ಸಹಯೋಗದಿಂದ ನಾವು ಪುನಃ ರಾಜ್ಯಭಾಗ್ಯವನ್ನು ಪಡೆಯುತ್ತೇವೆ. ಯಾವುದೇ ಕೈಕಾಲನ್ನು ಕದಲಿಸುವಂತಿಲ್ಲ, ಗುಪ್ತರೀತಿಯಿಂದ ನಾವು ನಮ್ಮ ಬೇಹದ್ದಿನ ತಂದೆಯಿಂದ ಆಸ್ತಿಯನ್ನು ಪಡೆಯುತ್ತೇವೆ. ಅದು ಅರ್ಧಕಲ್ಪ ಇರುವುದು. ಆ ಮಾಯಾ ಇಲಿಯಂತೂ ನಿಧಾನ-ನಿಧಾನವಾಗಿ ತಿನ್ನುತ್ತದೆ ಮತ್ತು ನೀವೀಗ ರಾಜ್ಯವನ್ನು 21 ಜನ್ಮಗಳಿಗಾಗಿ ಒಂದೇಬಾರಿ ತೆಗೆದುಕೊಳ್ಳುತ್ತೀರಿ. 84 ಜನ್ಮಗಳ ರಹಸ್ಯವನ್ನೂ ಸಹ ನಿಮಗೆ ತಿಳಿಸಲಾಗಿದೆ. ಇಷ್ಟಿಷ್ಟು ಜನ್ಮಗಳನ್ನು ತೆಗೆದುಕೊಂಡಿದ್ದೀರಿ. ನಿಮಗೆ ಗೊತ್ತಿದೆ- ಸತ್ಯಯುಗದಲ್ಲಿ ನಮ್ಮ ಆಯಸ್ಸು ಧೀರ್ಘಾಯಸ್ಸು ಇತ್ತು ನಂತರ ಅಪವಿತ್ರ ಭೋಗಿಗಳಾಗುವ ಕಾರಣ ದ್ವಾಪರ-ಕಲಿಯುಗದಲ್ಲಿ 63 ಜನ್ಮಗಳನ್ನು ಪಡೆಯುತ್ತೇವೆ. ಇದನ್ನು ತಂದೆಯೇ ತಿಳಿಸುತ್ತಾರೆ. ಕಲ್ಪ-ಕಲ್ಪವೂ ಮಾಯೆಯು ನಮ್ಮಿಂದ ರಾಜ್ಯವನ್ನು ಪಡೆಯುತ್ತದೆ ನಂತರ ನಾವು ಅದರಿಂದ ಪಡೆಯುತ್ತೇವೆ, ಗೀತೆಯಲ್ಲಿ ಹಾಡುತ್ತಾರಲ್ಲವೆ- ಯಾವ ದೇಶದಿಂದ ಬಂದೆವು, ಯಾವ ದೇಶಕ್ಕೆ ಹೋಗುವೆವು ಆದರೆ ಅರಿತುಕೊಂಡಿಲ್ಲ. ನಿಮಗೆ ಗೊತ್ತಿದೆ- ಆತ್ಮವು ಯಾವ ದೇಶದಿಂದ ಬಂದಿದೆ? ಏಕೆ ಬಂದಿದೆ, ಇಡೀ ಚಕ್ರವು ಬುದ್ಧಿಯಲ್ಲಿದೆ. ಇಡೀ ನಾಟಕದಲ್ಲಿ ನಾಯಕ-ನಾಯಕಿಯ ಪಾತ್ರವು ಶಿವತಂದೆಯದಾಗಿದೆ. ಶಿವತಂದೆಯ ಬಳಿ ಯಾವ-ಯಾವ ಪಾತ್ರಧಾರಿಗಳಿದ್ದಾರೆಯೋ ಮೊಟ್ಟಮೊದಲು ಬ್ರಹ್ಮಾ-ವಿಷ್ಣು-ಶಂಕರರಿಗೆ ಜನ್ಮ ಕೊಡುತ್ತಾರೆ ನಂತರ ನೀವು ಮಕ್ಕಳಿಗೆ. ನೀವು ತಂದೆಗೆ ಸಹಯೋಗಿಗಳಾದಿರಿ. ತಂದೆಯು ತನ್ನ ಪಾತ್ರವನ್ನಭಿನಯಿಸಿ ತನ್ನ ಧಾಮಕ್ಕೆ ಹೊರಟುಹೋಗುತ್ತಾರೆ ಮತ್ತು ಸಹಯೋಗಿಗಳಾದ ನಿಮ್ಮನ್ನೂ ಸಹ ಜೊತೆಯಲ್ಲಿ ಮುಕ್ತಿಧಾಮಕ್ಕೆ ಕರೆದುಕೊಂಡು ಹೋಗುತ್ತಾರೆ. ನೀವು ಮುಕ್ತಿಧಾಮಕ್ಕೆ ಹೋಗಿ ನಂತರ ಜೀವನ್ಮುಕ್ತಿಯಲ್ಲಿ ಬರುತ್ತೀರಿ. ಈ ಮಾತುಗಳನ್ನು ಎಷ್ಟು ಚೆನ್ನಾಗಿ ಬುದ್ಧಿಯಲ್ಲಿಟ್ಟುಕೊಳ್ಳಬೇಕು. ಇದಂತೂ ಸ್ವಪ್ನಗಳ ಜಗತ್ತಾಗಿದೆ. ವ್ಯರ್ಥವು ಕಳೆದುಹೋಗಿದೆ.

ನಿಮಗೆ ಗೊತ್ತಿದೆ- ಸತ್ಯಯುಗ-ತ್ರೇತಾಯುಗದಲ್ಲಿ ದೇವಿ-ದೇವತೆಗಳಿದ್ದರು, ಈಗಿಲ್ಲ. ಗೀತೆಯದು ಇಷ್ಟು ಗುಹ್ಯರಹಸ್ಯವಿದೆ- ಹೇಗೆ ಸ್ವಪ್ನಗಳ ಜಗತ್ತನ್ನು ಬುದ್ಧಿಯಲ್ಲಿಟ್ಟುಕೊಂಡು ಕುಳಿತಿದ್ದಾರೆ? ಇಡೀ ಚಕ್ರವು ಹೇಗೆ ಸುತ್ತುತ್ತದೆ? ಯಾವ ಜ್ಞಾನವು ತಂದೆಯಲ್ಲಿದೆಯೋ ಅದು ನಮ್ಮಲ್ಲಿಯೂ ಇದೆ. ಬೇಹದ್ದಿನ ತಂದೆಯಲ್ಲಿಯೂ ಇದೆಲ್ಲಾ ಬೇಹದ್ದಿನ ಜ್ಞಾನವಿದೆ. ಮಕ್ಕಳಿಗೆ ಗೊತ್ತಿದೆ- ಇದೂ ಸಹ ಸ್ವಪ್ನವಾಗಿಬಿಡುತ್ತದೆ. ಇವು ತುಂಬಾ ತಿಳಿದುಕೊಳ್ಳುವುದು ಮತ್ತು ತಿಳಿಸುವಂತಹ ಮಾತುಗಳಾಗಿವೆ. ಸತ್ಯಯುಗ-ತ್ರೇತಾದಲ್ಲಿ ಈ ಮಾತುಗಳು ಯಾರ ಬುದ್ಧಿಯಲ್ಲಿಯೂ ಇರುವುದಿಲ್ಲ. ಗುಹ್ಯವಿಷಯಗಳು ಸಿಗುತ್ತಿರುತ್ತವೆ. ಬುದ್ಧಿಯಲ್ಲಿ ಇಡೀ ಚಕ್ರವಿರಬೇಕು. ಭಕ್ತಿಮಾರ್ಗ ಏನಾಗಿದೆ, ಯಾವಾಗಿನಿಂದ ಪ್ರಾರಂಭವಾಗುತ್ತದೆ, ಇದರಿಂದ ಏನೂ ಲಾಭವಾಗಿಲ್ಲ. ಭಕ್ತಿ ಮಾಡುತ್ತಾ-ಮಾಡುತ್ತಾ ನಷ್ಟದಲ್ಲಿಯೇ ಬಂದುಬಿಟ್ಟಿದ್ದೀರಿ. ಈಗ ಕವಡೆಯಿಂದ ವಜ್ರಸಮಾನರಾಗುತ್ತೀರಿ. ಮಾಯೆಯು ಕವಡೆಯ ಸಮಾನ ಮಾಡಿಬಿಡುತ್ತದೆ. ತಂದೆಯೇ ಜ್ಞಾನದ ನೃತ್ಯವನ್ನು ಕಲಿಸುತ್ತಾರೆ ಮತ್ತೆ ಅಲ್ಲಿಗೆ ಹೋಗಿ ನೀವು ನೃತ್ಯವನ್ನು ಮಾಡುತ್ತೀರಿ. ಈ ಮಾತುಗಳು ತುಂಬಾ ಅದ್ಭುತವಾದ ತಿಳಿದುಕೊಳ್ಳಲು ಯೋಗ್ಯವಾಗಿದೆ. ಇಲ್ಲಿಯ ರೀತಿ-ಪದ್ಧತಿಗಳು ಅಲ್ಲಿ ಇರುವುದೇ ಇಲ್ಲ. ಅಲ್ಲಂತೂ ನಿರ್ವಿಕಾರಿ ಪ್ರಪಂಚವಾಗಿದೆ. ಅಲ್ಲಿ ಮಾಯೆಯ ಹೆಸರು-ಗುರುತೇ ಇರುವುದಿಲ್ಲ. ಮೊದಲು ನೀವು ತಂದೆಯನ್ನು ನೆನಪು ಮಾಡಿ, ಆಸ್ತಿಯನ್ನು ಪಡೆಯಿರಿ. ಉಳಿದಂತೆ ಅಲ್ಲಿನ ರೀತಿ-ಪದ್ಧತಿಗಳು ಏನಿರುತ್ತವೆಯೋ ಅವೇ ನಡೆಯುತ್ತವೆ. ಅಲ್ಲಿಯ ರೀತಿ-ಪದ್ಧತಿಗಳು ಹೊಸದಾಗಿರುವವು. ಅಲ್ಲಿ ಈ ಉತ್ಸವಗಳು ಆಗುವುದಿಲ್ಲ. ಇಲ್ಲಿ ಚಿಂತೆ, ಬೇಸರವಿರುವ ಕಾರಣ ಮನೋರಂಜನೆಗಳಾಗಿ ಆಚರಿಸುತ್ತಾರೆ ಅಲ್ಲಂತೂ ನಿತ್ಯವೂ ಮನೋರಂಜನೆಯಿರುತ್ತದೆ, ಅಳುವ ಅವಶ್ಯಕತೆಯಿರುವುದಿಲ್ಲ. ಉತ್ಸವವನ್ನು ಆಚರಿಸುವ ಮಾತೂ ಇರುವುದಿಲ್ಲ. ಸದಾ ನಮ್ಮದು ಉತ್ತಮ ದಿನಗಳಾಗಿರುತ್ತವೆ. ಅಲ್ಲಿ ಮದುವೆ ಸಮಾರಂಭವೂ ಸಹ ವಿಜೃಂಭಣೆಯಿಂದ ಆಗುತ್ತವೆ. ದಕ್ಷಿಣೆ ಸಿಗುತ್ತದೆ, ದಾಸ-ದಾಸಿಯರು ಸಿಗುತ್ತಾರೆ ಆದರೆ ಹಬ್ಬ-ಹರಿದಿನಗಳ ಅವಶ್ಯಕತೆಯಿರುವುದಿಲ್ಲ. ಇವು ಸಂಗಮಯುಗದ ಹಬ್ಬಗಳಾಗಿವೆ. ಇವನ್ನು ಭಕ್ತಿಮಾರ್ಗದಲ್ಲಿ ಆಚರಿಸಲಾಗುತ್ತದೆ, ಅಲ್ಲಂತೂ ಸದಾ ಖುಷಿಯೇ ಖುಷಿಯಿರುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸ್ವದರ್ಶನಚಕ್ರವನ್ನು ತಿರುಗಿಸುತ್ತಾ ಮಾಯೆಯ ಮೇಲೆ ಗುಪ್ತ ರೀತಿಯಲ್ಲಿ ವಿಜಯ ಪ್ರಾಪ್ತಿ ಮಾಡಿಕೊಳ್ಳಬೇಕಾಗಿದೆ. ತಂದೆಯ ಸಮಾನ ಜ್ಞಾನಪೂರ್ಣರಾಗಿರಬೇಕಾಗಿದೆ.

2. ತಂದೆಯು ಯಾರಾಗಿದ್ದಾರೆ, ಹೇಗಿದ್ದಾರೆ ಅವರನ್ನು ಯಥಾರ್ಥರೂಪದಲ್ಲಿ ಅರಿತುಕೊಂಡು ನೆನಪು ಮಾಡಬೇಕಾಗಿದೆ. ಬಿಂದುವಾಗಿ ಬಿಂದುತಂದೆಯ ನೆನಪಿನಲ್ಲಿರಬೇಕಾಗಿದೆ. ಮುಗ್ಧರಾಗಬಾರದು.

ವರದಾನ: ತಂದೆಯ ಸೂಚನೆಯ ಪ್ರಮಾಣ ಸೇವೆ ಎಂದು ತಿಳಿದು ಕಾರ್ಯ ಮಾಡುವಂತಹ ಸದಾ ಅಥಕ್ ಮತ್ತು ಬಂಧನಮುಕ್ತ ಭವ.

ಪ್ರವೃತ್ತಿಯನ್ನು ಸೇವೆ ಎಂದು ತಿಳಿದು ಸಂಭಾಲನೆ ಮಾಡಿ, ಬಂಧನ ಎಂದು ತಿಳಿದು ಅಲ್ಲ, ತಂದೆ ಸೂಚನೆ ಕೊಟ್ಟಿದ್ದಾರೆ - ಯೋಗಯುಕ್ತರಾಗಿ ಲೆಕ್ಕಾಚಾರ ಚುಕ್ತು ಮಾಡಿ. ಇದಂತೂ ತಿಳಿದಿದೆ ಅದು ಬಂಧನವಾಗಿದೆ. ಆದರೆ ಪದೇ-ಪದೇ ಹೇಳುವ ಅಥವಾ ಯೋಚಿಸುವುದರಿಂದ ಇನ್ನೂ ಕಠಿಣ ಬಂಧನವಾಗಿ ಬಿಡುವುದು ಮತ್ತು ಅಂತಿಮ ಗಳಿಗೆಯಲ್ಲಿ ಒಂದುವೇಳೆ ಬಂಧನವೇ ನೆನಪಿನಲ್ಲಿದ್ದರೆ ಗರ್ಭ ಜೈಲಿನಲ್ಲಿ ಹೋಗಬೇಕಾಗಬಹುದು. ಆದ್ದರಿಂದ ಎಂದೂ ಸಹ ತಮಗೆ ತಾವು ಬೇಸರಪಟ್ಟಿಕೊಳ್ಳಬೇಡಿ, ಸಿಕ್ಕಿಕೊಳ್ಳಲೂ ಬೇಡಿ ಮತ್ತು ಒತ್ತಡಕ್ಕೂ ಸಹ ಮಣಿಯಬೇಡಿ, ಆಟ ಆಡುತ್ತಾ ಆಡುತ್ತಾ ಕಾರ್ಯ ಮಾಡುತ್ತಾ ಹೋಗಿ ಅಗ ಅಥಕ್ ಆಗಿರುವಿರಿ ಮತ್ತು ಬಂಧನ ಮುಕ್ತ ಸಹ ಆಗುತ್ತ ಹೋಗುವಿರಿ.

**ಸ್ಲೋಗನ್:** ಭೃಕುಟಿಯ ಕುಟೀರದಲ್ಲಿ ಕುಳಿತು ತಪಸ್ವೀ ಮೂರ್ತಿಗಳಾಗಿರಿ - ಇದೇ ಅಂತರ್ಮುಖತೆಯಾಗಿದೆ.